ಓ.ಎಸ್. ನಂ. 210/2014

ಡಿ.ಡಬ್ಲ್ಯೂ: 01

ದಿನಾಂಕ: 27.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: ವಾದಿ ಪರ – ಶ್ರೀ TMS ವಕೀಲರಿಂದ.

ವಾದಿಯ ತಂದೆ ಹೆಸರು ಮುತ್ತೆಪ್ಪ. ಅವರಿಗೆ ವಾದಿ ಮತ್ತು 1 ನೇ ಪ್ರತಿವಾದಿ ಮಕ್ಕಳು ಇರುತ್ತಾರೆ. 1 ನೇ ಪ್ರತಿವಾದಿ ನನ್ನ ಪತ್ನಿ. ಮುತ್ತೆಪ್ಪ, ಮೂಗಪ್ಪ ಮತ್ತು ಸಿದ್ದಪ್ಪ ಇವರುಗಳು 3 ಜನ ಅಣ್ಣತಮ್ಮಂದಿರಾಗಿರುತ್ತಾರೆ. ಅವರ ತಂದೆಯ ಹೆಸರು ಕುರುಡೈಯಗಳ ನಾಗಪ್ಪ. ಈಗ ಮೂಗಪ್ಪ ಮತ್ತು ಆತನ ಪತ್ನಿ ಮೃತಪಟ್ಟಿರುತ್ತಾರೆ. ಮೂಗಪ್ಪನಿಗೆ ಪ್ರತಿವಾದಿ 2-6 ರವರು ಮಕ್ಕಳು ಇರುತ್ತಾರೆ. ದಾವಾ ಸ್ವತ್ತು ಮೂಲತಃ ಮುತ್ತೆಪ್ಪ, ಮೂಗಪ್ಪ ಮತ್ತು ಸಿದ್ದಪ್ಪ ಇವರುಗಳು ಆಸ್ತಿಯಾಗಿರುತ್ತದೆ. ಅವರುಗಳಿಗೆ ಅದು ಅವರ ಅಪ್ಪನ ಕಡೆಯಿಂದ ಬಂದಿರುತ್ತದೆ. ಸರ್ವೆ ನಂಬರ್ 102 ಡಿ/2 ಆಸ್ತಿ ವಾದಿಯವರ ಪೂರ್ವಜರ ಆಸ್ತಿ ಎಂದರೆ ಸರಿ.

ಮುತ್ತೆಪ್ಪ, ಮೂಗಪ್ಪ ಮತ್ತು ಸಿದ್ದಪ್ಪರವರುಗಳ ಮದ್ಯ ಭಾಗ ಆಗಿರುವುದಿಲ್ಲ ಎಂದರೆ 50-60 ವರ್ಷಗಳ ಹಿಂದೆ ಆಗಿರುತ್ತದೆ. ಆದರೆ ಯಾವುದೇ ದಾಖಲಾತಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ಮೌಖಿಕವಾಗಿ ಭಾಗ ಆಗಿರುತ್ತದೆ. ಅದರಲ್ಲಿ ಯಾರು ಯಾರಿಗೆ ಯಾವ ಭಾಗ ಬಂದಿತು ಎಂದರೆ ಮುತ್ತೆಪ್ಪನಿಗೆ 102 ಬಿ ವಿಸ್ತೀರ್ಣ 41 ಸೆಂಟ್ಸ. 104 ಎ ವಿಸ್ತೀರ್ಣ 29 ಸೆಂಟ್ಸ, 86 ಸಿ ವಿಸ್ತೀರ್ಣ 1 ಎಕರೆ 52 ಸೆಂಟ್ಸ, 85 ಇ ವಿಸ್ತೀರ್ಣ 2 ಎಕರೆ 21 ಸೆಂಟ್ಸ ಬಂದಿರುತ್ತದೆ. ಮೂಗಪ್ಪ ಮತ್ತು ಸಿದ್ದಪ್ಪರವರಿಗೆ ಯಾವ ಸರ್ವೆ ನಂಬರ್ ಬಂದಿದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸಿದ್ದಪ್ಪನಿಗೆ 4 ಎಕರೆ 6 ಸೆಂಟ್ಸ, 21 ಸೆಂಟ್ಸ, 6 ಸೆಂಟ್ಸ ಬಂದಿರುತ್ತದೆ. ಮೂಗಪ್ಪನಿಗೆ 1 ಎಕರೆ 11 ಸೆಂಟ್ಸ, 1 ಎಕರೆ 82 ಸೆಂಟ್ಸ, 83 ಸೆಂಟ್ಸ ಹಾಗೂ 32 ಸೆಂಟ್ಸ ಆಸ್ತಿ ಬಂದಿರುತ್ತದೆ.

ಸರ್ವೆ ನಂಬರ್ 102 ಡಿ/2 ಯಾರ ಭಾಗಕ್ಕೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಾವ ಮನೆ ಯಾರ ಭಾಗಕ್ಕೆ ಬಂದಿದೆ ಎಂದು ನನಗೆ ಹೇಳಲಾಗುವುದಿಲ್ಲ. ತಕರಾರನ್ನು ನಾನೇ ಹೇಳಿ ಬರೆಸಿರುತ್ತೇನೆ. ಯಾರ ಭಾಗಕ್ಕೆ ಯಾವ ಆಸ್ತಿ ಬಂದಿದೆ ಎಂದು ನಾನೇ ಹೇಳಿ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ಮೇಲೆ ಹೇಳಿದ ಭಾಗದ ಅನ್ವಯ ಯಾವುದೇ ಪಹಣಿಗಳಾಗಿರುವುದಿಲ್ಲ, ಸಾಕ್ಷಿ ಮುಂದುವರೆದು ಅದು ದೊಡ್ಡವನ ಹೆಸರಿನಲ್ಲಿದೆ. ನಾನು ಹೇಳಿದಂತೆ ಮುತ್ತೆಪ್ಪ, ಮೂಗಪ್ಪ ಮತ್ತು ಸಿದ್ದಪ್ಪ ಮದ್ಯ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ತಂದೆಯ ಭಾಗಕ್ಕೆ ಬಂದ ಆಸ್ತಿಯನ್ನು ನಾನು 2008 ರಲ್ಲಿ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಪತ್ರವನ್ನು ಮೂಗಪ್ಪನ ಕಡೆಯಿಂದ ಬರೆಸಿಕೊಂಡಿರುತ್ತೇನೆ. ಸದರಿ ಖರೀದಿ ಪತ್ರದಲ್ಲಿ ಮುತ್ತೆಪ್ಪನಿಗೆ ಸದರಿ ಆಸ್ತಿಗಳು ಭಾಗದಲ್ಲಿ ಬಂದಿದೆ ಎಂದು ನಮೂದಾಗಿರುವುದಿಲ್ಲ. ಅದರಲ್ಲಿ ಮುತ್ತೆಪ್ಪನಿಗೆ ಬಂದ ಆಸ್ತಿಯನ್ನು ಮೂಗಪ್ಪ ಮಾರಾಟ ಮಾಡುತ್ತಿರುವಾಗ ಬರೆದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಮುತ್ತೆಪ್ಪ ಹಾಗೂ

ಮೂಗಪ್ಪನಿಗೂ ಓದಲು ಬರೆಯಲು ಬರುವುದಿಲ್ಲ. ಮೂಗಪ್ಪನಿಗೆ ಖರೀದಿ ಪತ್ರ ಬರೆದು ಕೊಡಲು ಅಧಿಕಾರ ಇರಲಿಲ್ಲ ಎಂದರೆ ಸರಿ. ನಾನು ಮತ್ತು ಮೂಗಪ್ಪ ಸೇರಿಕೊಂಡು ನಿಡಿ 1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ದುಡ್ಡನ್ನು ನೀಡಿ ಖರೀದಿಸಿರುತ್ತೇನೆ. ಖರೀದಿ ಸಮಯದಲ್ಲಿ ನಾನು ವಾದಿಯನ್ನು ಕೇಳಿರುವುದಿಲ್ಲ. ನಿಡಿ 1 ವಾದಿಗೆ ಅನ್ವಯಿಸುವುದಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ.

ದಾವಾ ಆಸ್ತಿ 5-8 ನ್ನು ಪ್ರತಿವಾದಿ 7 ರವರು ಸ್ವಾಧೀನದನ್ವಯ ಪಹಣಿ ಮಾಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ವಾದಿ ಹಾಗೂ 1 ನೇ ಪ್ರತಿವಾದಿಯನ್ನು 7 ನೇ ಪ್ರತಿವಾದಿ ಕೇಳಿರುವುದಿಲ್ಲ. 7 ನೇ ಪ್ರತಿವಾದಿ ವಾದಿಗೆ ತಿಳಿಯದೇ ಅಕ್ರಮವಾಗಿ ತನ್ನ ಹೆಸರಿಗೆ ಪತ್ರ ಬರೆಸಿಕೊಂಡಿರುತ್ತಾನೆ ಎಂದರೆ ಇರಬಹುದು. ನಿಡಿ 49 ಮನೆಯ ಕರಾರು ಪತ್ರ ಆಗಿರುತ್ತದೆ. ಸದರಿ ದಾಖಲೆಯ ಮನೆಯ ಸಂಖ್ಯೆ 150 ಆಗಿರುತ್ತದೆ. ಅದನ್ನು 2010 ರಲ್ಲಿ ಬರೆಸಿಕೊಂಡಿರುತ್ತೇನೆ. ದಿನಾಂಕ ನನಗೆ ನಿಖರವಾಗಿ ನೆನಪಿಲ್ಲ. ಅದನ್ನು ಪಂಚಾಯತಿಯ ಸೆಕ್ರೆಟರಿ ಬರೆದಿರುತ್ತಾರೆ. ಅದಕ್ಕೆ ಸ್ಟಾಂಪನ್ನು ನಿಡಿ 49 ಮಾಡುವ ಮುಂಚೆ ನಾನೇ ಕೂಡ್ಲಿಗಿಯಿಂದ ಖರೀದಿ ಮಾಡಿ ತಂದಿರುತ್ತೇನೆ. ಅದನ್ನು ಬರೆಯಲು ರೆಡ್ಡಿಹಳ್ಳಿ ಗೌಡರು ಮಾಹಿತಿಯನ್ನು ನೀಡಿರುತ್ತಾರೆ. ಅದನ್ನು ಬರೆಯುವಾಗ ಮುತ್ತೆಪ್ಪನವರು, ನಾನು ಮತ್ತು ಗೌಡರು ಇದ್ದೆವು. ನಿಡಿ 49 ನ್ನು ಮುತ್ತೆಪ್ಪ ಬರೆದುಕೊಟ್ಟಿರುವುದಿಲ್ಲ ಅದನ್ನು ನಾನು ಇತ್ತೀಚೆಗೆ ಕೇಸಿಗಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ನೊಂದಾಯಿಸುವ ಪ್ರಯತ್ನ ಮಾಡಿಲ್ಲ.

ದಾವಾ ಸ್ವತ್ತುಗಳು ಹಾಗೂ ಸರ್ವೆ ನಂಬರ್ 102 ಡಿ/2 ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿದ್ದು ಇಂದಿಗೂ ವಿಭಾಗ ಆಗಿಲ್ಲ ಎಂದರೆ ಆಗಿರುತ್ತದೆ. ಆಸ್ತಿ ಲಪಟಾಯಿಸುವ ಉದ್ದೇಶದಿಂದ ನಿಡಿ 1 ಮತ್ತು 49 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಇಲ್ಲ. ಮುತ್ತೆಪ್ಪನಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ ಹಕ್ಕು ಇದೆ ಎಂದರೆ ದಾವಾ ಆಸ್ತಿಗಳ ಪೈಕಿ 9-12 ನ್ನು ನಾನು ಖರೀದಿ ಮಾಡಿರುತ್ತೇನೆ. ನಿಡಿ 1 ಮತ್ತು 49 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಇಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.